# ಆಹಾ ಸುದ್ದಿ!

★ ಸಸಿತೋಟ



ಲಂಡನ್ನಿನ ಡೇವಿಡ್ ಎಂಬಾತ ಜೆಟ್‌ಪ್ಯಾಕ್ ಹಾರುವ ಯಂತ್ರ ಕಟ್ಟಿಕೊಂಡು ಆಕಾಶದಲ್ಲಿ ಹಾರಿದ ಮೊಟ್ಟ ಮೊದಲ ಮಾನವ. ಈ ರೀತಿ ಹತ್ತು ನಿಮಿಷ ಹಾರಾಟ ನಡೆಸಬಹುದಂತೆ. ಎದುರಿಗೆ ಸಾಲಗಾರ ಬಂದರೆ ಗಲ್ಲಿ ಹುಡುಕಬೇಕಾದ ಅಗತ್ಯವಿಲ್ಲ.



ಜರ್ಮನಿಯ ಮಾಜಿ ರೇಸ್ ಚಾಲಕ ಮೈಕೇಲ್ ಸುಮಾರು 50 ಹಳೆಯ ಕಾರುಗಳನ್ನು ತನ್ನ ತೋಟದಲ್ಲಿ ಈ ರೀತಿ ಮರಕ್ಕೆ ಡಿಕ್ಕಿ ಹೊಡೆಸಿಯೋ, ಮಣ್ಣಿನಲ್ಲಿ ಹೂತೋ ಇಟ್ಟಿದ್ದಾನಂತೆ. ಅಸ್ಥಿಪಂಜರವಾಗಿರುವ ಈ ಕಾರುಗಳಿಗೆ ಈಗ 10 ಲಕ್ಷ ಡಾಲರ್ ಬೆಲೆ ಬಂದಿದೆಯಂತೆ. ಮಣ್ಣೊಳಗೆ ಕಾಸು ಹೂತಿಡುವುದಕ್ಕಿಂತ ಕಾರು ಹೂತಿಡುವುದು ಒಳ್ಳೆ ಐಡಿಯಾ.

ಫ್ಲಾರಿಡಾದಲ್ಲಿ 24 ವರ್ಷದ ಯುವತಿಯೊಬ್ಬಳು 68ರ ಅಜ್ಜನನ್ನು ಮದುವೆಯಾದಳು. ಇವೆಲ್ಲ ಅಲ್ಲಿ ಸಾಮಾನ್ಯ ಬಿಡಿ. ಆದರೆ ಆತ ನಿಜವಾಗಿಯೂ ಆಕೆಯ ಅಜ್ಜನಾಗಬೇಕಂತೆ. ಲಾಟರಿಯಲ್ಲಿ ಜ್ಯಾಕ್‌ಪಾಟ್ ಹೊಡೆದ ಅಜ್ಜ ಮೂರನೇ ಮದುವೆಯಾಗ ಬಯಸಿದಾಗ ಸಿಕ್ಕವಳು ಈಕೆ. ಅಜ್ಜನ ಕುಟುಂಬದ ಆಲ್ಬಂ ನೋಡುವಾಗ ಆತನ ಮಕ್ಕಳ ಫೋಟೋದಲ್ಲಿ ತನ್ನ ತಂದೆಯನ್ನು ಗುರುತಿಸಿದಳಂತೆ. ಈಗ ಅಜ್ಜ ಮೊಮ್ಮಗಳು ಕಂ ಹೆಂಡತಿಗೆ ಕಥೆ ಹೇಳುತ್ತ ಕೂರುವುದನ್ನು ಬಿಟ್ಟು ಇನ್ನೇನು ಮಾಡಲು ಸಾಧ್ಯ?

ಬ್ರೂಕ್ಲಿನ್‌ನಲ್ಲಿ ಎಲ್ಲಾ ಮಹಿಳೆಯರೇ ಇದ್ದ ನಾಟಕದ ತಂಡ ಶೇಕ್ಸ್‌ಪಿಯರ್‌ನ 'ದಿ ಟೆಂಪೆಸ್ಟ್' ನಾಟಕವಾಡಲು ನಿರ್ಧರಿಸಿತು. ಕುತೂಹಲದಿಂದ ಸಭಾಂಗಣದ ತುಂಬಾ ಪ್ರೇಕ್ಷಕರು ತುಂಬಿದ್ದರು. ಹೇಳಿಕೇಳಿ ಅದರ ಹೆಸರು ಟಾರ್ನ್ ಔಟ್ ನಾಟಕದ ಕಂಪೆನಿ. ಪ್ರದರ್ಶನ ಶುರುವಾದ ಕೂಡಲೇ ಪಾತ್ರಧಾರಿಗಳು ಉಡುಪಿನ ಹಂಗೇಕೆ ಎಂದು ಪರಪರ ಹರಿದುಕೊಂಡರಂತೆ. ಈಗ ಕುತೂಹಲ ಆಕರ್ಷಣೆಯಾಗಿ ಬದಲಾಗಿರಬಹುದು.



ಚೀನಾದಲ್ಲಿ ಹೆಣೆದುಕೊಂಡಂತೆ ಕಟ್ಟಲಾಗಿರುವ ಈ ಪಾದಚಾರಿ ಸೇತುವೆ ವಿಶ್ವದಲ್ಲಿಯೇ ಅತ್ಯಂತ ಸೆಕ್ಸಿ ರಚನೆಯಂತೆ. ಹಾಗಂತ ಸಿಎನ್‌ಎನ್ ತಾರೀಫು ಮಾಡಿ ಸರ್ಟಿಫಿಕೇಟ್ ಕೊಟ್ಟಿದೆಯಂತೆ. ಓಡಾಡಲು ಕಟ್ಟಿದ್ದು ಆ ರೀತಿ ಕಾಣುವುದೆಂದರೆ... ಏನೋ ಮಾಡಲು ಹೋಗಿ ಮತ್ತೇನೋ ಆಗುವುದೆಂದರೆ ಇದೇ ಇರಬಹುದು.



ಥಾಯ್ಲೆಂಡ್‌ನ ಫುಕೆಟ್‌ನಲ್ಲಿ ವಾರ್ಷಿಕ ಸಸ್ಯಾಹಾರಿಗಳ ಹಬ್ಬ ನಡೆಯಿತು. ಚೀನಾದ ಭಕ್ತನೊಬ್ಬ ಮೈತುಂಬ ಸೇಫ್ಟಿ ಪಿನ್ ಚುಚ್ಚಿಕೊಂಡು ರಕ್ತ ಹರಿಸುತ್ತ ಹರಕೆ ತೀರಿಸಿದ. ಸಸ್ಯಾಹಾರಿ ದೇವತೆಗೆ ಡಿಸೈನರ್ ಹರಕೆ.